ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್:—ಸ್ವಾಮಿ ಮಹಿಳೆಯರನ್ನು ವೀಕರ್ ಸೆಕ್ಷನ್ ಎಂದು ಭಾವಿಸುತ್ತೀರೋ ಅಥವಾ ಸ್ಟ್ರಾಂಗರ್ ಸೆಕ್ಷನ್ ಎಂದು ಭಾವಿಸುತ್ತಿರೋ ?

ಶ್ರೀ ಡಿ. ದೇವರಾಜ ಅರಸ್ :—ಸಂದರ್ಭ ಬಂದ ಹಾಗೆ ಭಾವಿಸಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ —ಆರ್ಟಿಕಲ್ 51ರ ಪ್ರಕಾರ ಮಹಿಳೆಯರಿಗೆ ರಿಸರ್ವೇಷನ್ ಕೊಡುವುದಕ್ಕಾಗುವುದಿಲ್ಲ"ಎಂದು ಹೇಳುವುದಾದರೂ ನೇಮಕ ಮಾಡುವಾಗ ಅವರಿಗೆ ಪ್ರಿಫರೆನ್ಷಿಯಲ್ ಟ್ರೀಟ್‌ಮೆಂಟ್ ತೋರಿಸ ಬೇಕು ಎನ್ನುವುದನ್ನಾದರೂ ಸೂಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ —ಯೋಚನೆ ಮಾಡೋಣ.

* *Rise in Prices of Milk by Bangalore Diary*

220 SRI T. R. SHAMANNA (Fort)—

Will the Minister for Agriculture and Animal Husbandry be pleased to state:

(*a*) the number of times the milk rates have been raised by Bangalore Dairy after it came into existance.

(*b*) the rise in rates of milk each time (from-to);

(*c*) the steps taken to find out ways and means of protecting consumers' interest without undue hardship to milk producers?

SRI N. CHIKKE GOWDA: (Minister for Agriculture & Animal Husbandry)

(*a*) Nine times.

(*b*) The rise in rate of whole milk in as follows :—

Date from which given effect from	to	Whole milk Rs per litre
27- 4-1965	9-10-1965	0-90
10-10-1965	15- 4-1967	0-98
16- 4-1967	31-10-1967	1-00
1-11-1967	15- 6-1970	1-24
16- 6-1970	31-12-1972	1-26
1- 1-1973	6- 5-1973	1-30
7- 5-1973	5- 8-1973	1-40
6- 8-1973	22- 2-1974	1-50
23- 2-1974	4-10-1974	1-70
5-10-1974	to date	1-80

(*c*) The Consumers' interest is protected by maintaining the minimum level of distribution even in lean seasons despite a very high cost involved in making use of imported skim milk powder for re-constitution purposes.

The selling rate of milk by the Bangalore Dairy is the lowest compared to the prevailing market rate at Bangalore.

ಒಂದು ತಿದ್ದುಪಡಿಯನ್ನು ಉತ್ತರದಲ್ಲಿ ಮಾಡಬೇಕಾಗಿದೆ. ಕೊನೆಯಲ್ಲಿ 9-2-1975ರ ವರೆಗೆ ಹಾಲಿನ ಬೆಲೆ ಎರಡು ರೂಪಾಯಿ ಎಂದು ಸೇರಿಸಿಕೊಳ್ಳಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಕಳೆದ ಹತ್ತು ವರ್ಷಗಳಲ್ಲಿ 1 ಬಾರಿ ಬೆಂಗಳೂರು ಡೈರಿಯ ಹಾಲಿನ ಬೆಲೆ ಜಾಸ್ತಿಯಾಗಿದೆ ಮತ್ತು ಅದು 90 ಪೈಸೆ ಇದ್ದುದು ಎರಡು ರೂಪಾಯಿಗಳ ತನಕ ಬಂದಿದೆ. ಅದು ನೂರು ಪರ್ಸೆಂಟ್ ಗಿಂತ ಹೆಚ್ಚಾಗಿದೆ. ಆದರೂ ಹಾಲಿನ ಅಭಾವದ ಪರಿಸ್ಥಿತಿ ಇರುವಾಗ ಬೆಲೆಯನ್ನು ಹೆಚ್ಚಿಸುತ್ತಾ ಇರುವಾಗ ಕನ್ಸ್ಯೂಮರ್ಸ್‌ಗೂ ಮತ್ತು ಹಾಲನ್ನು ಉತ್ಪಾದನೆ ಮಾಡತಕ್ಕವರಿಗೂ ಏನೂ ಅನುಕೂಲ ಮಾಡುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದೀರಿ ?

†ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಿಗೆ ಕಳೆದ ಎರಡು ದಿವಸಗಳ ಹಿಂದೆ ಅವರು ಕಳುಹಿಸಿದ ಒಂದು ಕಾಲಿಂಗ್ ಅಟ್‌ನ್‌ಷನ್ ಬಗ್ಗೆ ನಾವು ಕೊಡತಕ್ಕ ಅನುಕೂಲಗಳ ಬಗ್ಗೆ ಉತ್ತರ ಹೇಳಿದ್ದೇನೆ. ಬೆಂಗಳೂರು ಡೈರಿಯವರು ಒಂದು ಲೀಟರ್ ಹಾಲಿಗೆ 00-3ಪೈಸೆ ನಷ್ಟ ಮಾಡಿಕೊಂಡು ಹಾಲನ್ನು ಮಾರುತ್ತಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಹತ್ತು ಬಾರಿ ಹಾಲಿನ ದರ ಏರಿದೆ, ಹನ್ನೊಂದು ಬಾರಿಯಲ್ಲ. ಪ್ರತಿಯೊಂದು ವರ್ಷದಲ್ಲಿ ಬೇರೆ ಬೇರೆ ಪದಾರ್ಥಗಳ ಬೆಲೆಗಳಿಗೆ ಇದನ್ನು ಹೋಲಿಸಿ ನೋಡಿದರೆ ಹಾಲಿನ ಬೆಲೆ ಹೆಚ್ಚಾಗಿರತಕ್ಕದ್ದು ಹೆಚ್ಚೇನೂ ಅಲ್ಲ. ಓಪನ್ ಮಾರ್ಕೆಟಿನಲ್ಲಿ ಹಾಲಿನ ಬೆಲೆ ಡೈರಿಯವರ ಬೆಲೆಗಿಂತಲೂ ಜಾಸ್ತಿ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ಧೀರ್ಘವಾಗಿ ಉತ್ತರ ಕೊಡುವಾಗ ಆಗಲೇ ಹೇಳಿದ್ದೇನೆ. ನಾವು ಗ್ರಾಹಕರಿಗೆ ಕಡಿಮೆ ದರದಲ್ಲಿ ಹಾಲನ್ನು ಮಾರಬೇಕು ಎಂದು 3ಪೈಸೆ ನಷ್ಟ ಮಾಡಿಕೊಂಡು ಹಾಲನ್ನು ಒದಗಿಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ —ಹಾಲನ್ನು ಉತ್ಪಾದನೆ ಮಾಡತಕ್ಕ ಹಸುಗಳ ಬೆಲೆ ಒಂದಕ್ಕೆ ನಾಲ್ಕರಷ್ಟಾಗಿದೆ, ಮತ್ತು ಹಸುಗಳಿಗೆ ಬೇಕಾಗಿರತಕ್ಕ ಮೇವು, ಬೂಸಾ ಇತ್ಯಾದಿಗಳ ಬೆಲೆಯು ಒಂದಕ್ಕೆ ಮೂರರಷ್ಟಾಗಿದೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಲನ್ನು ಉತ್ಪಾದನೆ ಮಾಡತಕ್ಕವರು ನಷ್ಟವನ್ನು ಅನುಭವಿಸಲಾರದೆ ಹಸುಗಳನ್ನು ನಷ್ಟಕ್ಕೆ ಮಾರಾಟ ಮಾಡುತ್ತಿದ್ದಾರೆ. ಇಂಥ ಸರಿಸ್ಥಿತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ಅವರಿಗೆ ಯಾವ ಸೌಲಭ್ಯವನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ.—ಉತ್ಪಾದಕರಿಂದಲೂ ಮತ್ತು ಗ್ರಾಹಕರಿಂದಲೂ ಬೆಲೆ ಜಾಸ್ತಿಯಾಗಿರುವ ಬಗ್ಗೆ ದೂರುಗಳು ಬಂದಿವೆ. ಇವೆರಡನ್ನೂ ಸಮತೂಗಿಸಿ ನ್ಯಾಯ ಬೆಲೆಗೆ ಹಾಲನ್ನು ಕೊಡುವುದು ಸೂಕ್ತ ಎಂದು ತಿಳಿದುಕೊಂಡು ಸರ್ಕಾರದವರು ಹಾಲಿನ ಬೆಲೆಯನ್ನು ನಿಗದಿಮಾಡಿರತಕ್ಕದ್ದು.

* PERMITS GRANTED TO CONTRACT CARRIAGES IN TUMKUR DISTRICT

253. SRI B. BYRAPPAJI (Turuvekere) :—Will the Minister for Transport and Tourism be pleased to state.—

(*a*) the number of contract carriage permits issued by Government in Tumkur District ;

(*b*) the names of buses and their places of origin/ destination ;